ವಿಷ ಸವರಿದ ಖಡ್ಗದ ಮೊನೆಯಂತಹ ಸತ್ಯ ನನ್ನನ್ನು ಈಗಲೂ ಕೊಲ್ಲುತ್ತಿರುತ್ತದೆ. ಯಾವ ಬರಹಗಾರನಿಗೂ ಆ ಕಾಲದ ಮೇಲೆ ತನ್ನನ್ನು ತಾನು ಹೇರಿಕೊಳ್ಳಲು ಸಾಧ್ಯವಾಗುವುದಿಲ್ಲ ಎನ್ನುವುದು ದೊಡ್ಡ ಸತ್ಯ. ಕಾಲ ಮಾತ್ರ ಸಾಹಿತ್ಯವನ್ನೂ ಕತೆಗಾರರನ್ನೂ ಕವಿಗಳನ್ನೂ ಸೃಷ್ಟಿಸಬಲ್ಲದು. ಅಕಾಲದಲ್ಲಿ ಬರೆಯುವವನು ಎಂತಹ ಅಭಿಜಾತ ಪ್ರತಿಭಾವಂತನಾಗಿದ್ದರೂ ಕಾಲ ಆತನನ್ನು ಅಂಡು ಒರೆಸುವ ಕಾಗದದಂತೆ ಬಳಸಿಕೊಳ್ಳುತ್ತದೆ. ಹಾಗಾಗಿ ತಂತ್ರಗಾರಿಕೆ, ಕಲಾತ್ಮಕತೆ ಇತ್ಯಾದಿಗಳಿಂದ ಸುಸ್ತು ಹೊಡೆಸಿಕೊಳ್ಳದೆ ಬದುಕಿನ ಇತರ ಸೌಂದರ್ಯಗಳತ್ತ ಮುಖ ಮಾಡುವುದು ಜಾಣತನ ಎಂಬುದು ನನ್ನ ಅನುಭವ. ಇದೆಲ್ಲ ಚಿಂತೆಗಳನ್ನು ಬಿಟ್ಟು ಪೂರ್ಣಚಂದ್ರನಂತಹ ಅವಳನ್ನು ಒಲಿಸಿಕೊಳ್ಳಲು ಅಷ್ಟು ಸಣ್ಣ ವಯಸ್ಸಿನಲ್ಲೇ ಅದೆಷ್ಟು ಒದ್ದಾಡುತ್ತಿದ್ದೆನಲ್ಲಾ ಮತ್ತು ಈಗಲೂ ಹಾಗೆಯೇ ಓಡಾಡುತ್ತಿರುವೆನಲ್ಲಾ ಎಂಬುದು ನನಗೆ ಅತ್ಯಂತ ಹೆಮ್ಮೆಯ ವಿಷಯ. ನಕ್ಷತ್ರದಂತೆ ಕನಸಲ್ಲಿ ಬಂದಿದ್ದ ಅವಳು ಮತ್ತೆ ನಿಜವಾಗಿಯೂ ದುಡುದುಡು ಓಡಿಕೊಂಡು ಬಂದು ಪಕ್ಕದಲ್ಲಿ ಕುಳಿತು ಕಿವಿ ನಿಮಿರಿಸಿದರೆ ಅವಳಿಗೆ ಹೇಳಲು ಎಷ್ಟೊಂದು ಕತೆಗಳಿವೆಯಲ್ಲಾ ಎಂದು ಹುಮ್ಮಸ್ಸುಗೊಳ್ಳುತ್ತಿದ್ದೇನೆ.


## ನಿಮ್ಮ ನೆಚ್ಚಿನ 'ಮಯೂರ'ವನ್ನು ಅಂಚೆಯ ಮೂಲಕವೂ ತರಿಸಿಕೊಳ್ಳಬಹುದು

ನೀವು ಕಳುಹಿಸುವ ಡಿ.ಡಿ 'ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್'-ಹೆಸರಿಗೆ ಇರಬೇಕು. ನೇರವಾಗಿ ಖಾತೆಗೆ ಹಣ ಕಳುಹಿಸುವವರು ಬೆಂಗಳೂರಿನ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮಹಾತ್ಮ ಗಾಂಧಿ ರಸ್ತೆ ಶಾಖೆಯ **ಖಾತೆ ಸಂಖ್ಯೆ**: 64018861169ಗೆ ಜಮಾ ಮಾಡಬಹುದು. ಬ್ಯಾಂಕ್ ಐಎಫ್‌ಎಸ್ ಕೋಡ್ **ಎಸ್‌ಬಿಐಎನ್**0040006.

**ಚಂದಾ ವಿವರ (ಅಂಚೆ ವೆಚ್ಚ ಸೇರಿ)**

**ದೇಶದ ಒಳಗೆ**


ವಾರ್ಷಿಕ : ₹. 264.00 (12 ಸಂಚಿಕೆಗಳಿಗೆ)
ಅರ್ಧ ವಾರ್ಷಿಕ: ₹. 132.00 (6 ಸಂಚಿಕೆಗಳಿಗೆ)

**ವಿದೇಶಗಳಿಗೆ**

ವಾರ್ಷಿಕ: ₹. 1320.00 (12 ಸಂಚಿಕೆಗಳಿಗೆ)
ಅರ್ಧ ವಾರ್ಷಿಕ: ₹. 660.00 (6 ಸಂಚಿಕೆಗಳಿಗೆ)

ಚಂದಾ ಕಳುಹಿಸಿದವರು ತಮ್ಮ ವಿಳಾಸ, ದೂರವಾಣಿ ಸಂಖ್ಯೆಯನ್ನು ಸ್ಪಷ್ಟವಾಗಿ ಬರೆಯಬೇಕು.






ಪ್ರಸರಣ ವಿಭಾಗ
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್
ನಂ. 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು– 560 001
ದೂರವಾಣಿ: 080–25880199, 219
ಇ–ಮೇಲ್: circulation-blore@deccanherald.co.in